ದಿನಾಂಕ 20-9-2014 ರಂದು ಕೊಠಡಿ ಸಂ. 252. ಬಹುಮಹಡಿಗಳ ಕಟ್ಟಡ, ಬೆಂಗಳೂರಿನಲ್ಲಿ ಜರುಗಿದ ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ವ್ಯವಸ್ಥಾಪನಾ ಮಂಡಳಿಯ ಇಪ್ಪತ್ತನೇಯ ಸಭೆಯ ನಡುವಳಿಗಳು:

ಉಪಸ್ಥಿತರಿದ್ದ ಸದಸ್ಯರು:

| | | |
|---|---|---|
| 1. | ಡಾ. ಬಿ.ಎಸ್. ಜನಗೌಡರ್ | ಅಧ್ಯಕ್ಷರು |
| 2. | ಶ್ರೀ ಶ್ರೀ ಭರತ್‌ಲಾಲ್ ಮೀನಾ | ಸದಸ್ಯರು |
| 3. | ಶ್ರೀ ಕೆ.ಎಂ ವೀರಯ್ಯ | ಸದಸ್ಯರು |
| 4. | ಶ್ರೀ ಪ್ರಿಯಾಂಕ ಎಂ. ಖರ್ಗೆ | ಸದಸ್ಯರು |
| 5. | ಶ್ರೀ ಹೆಚ್.ಎಸ್. ಸಾದತ್ ಅಲಿ ಖಾನ್ | ಸದಸ್ಯರು |
| 6. | ಶ್ರೀ ಪ್ರವೀಣ ವಿ. ನಾಯಕ್ | ಸದಸ್ಯರು |
| 7. | ಡಾ. ಕೆ.ಎಸ್. ವರಪ್ರಸಾದ್ | ಸದಸ್ಯರು |
| 8 | ಡಾ. ಪಿ. ಬಾಲಕೃಷ್ಣನ್ | ಸದಸ್ಯರು |
| 9 | ಶ್ರೀ ಕೆ.ಎಲ್. ಲೋಕನಾಥ | ವಿಶೇಷ ಆಹ್ವಾನಿತರು |
| 10 | ಡಾ. ಬಿ.ಎಸ್. ಜನಗೌಡರ್ | ಸದಸ್ಯ–ಕಾರ್ಯದರ್ಶಿ |

ಪ್ರಾರಂಭದಲ್ಲಿ, ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಮಾನ್ಯ ವ್ಯವಸ್ಥಾಪನಾ ಮಂಡಳಿಯ ಇಪ್ಪತ್ತನೇಯ ಸಭೆಗೆ ಸರ್ವಸದಸ್ಯರನ್ನು ಮಾನ್ಯ ಕುಲಪತಿಗಳು ಹಾಗೂ ಸಭಾಧ್ಯಕ್ಷರು ಸ್ವಾಗತ ಕೋರಿದರು. ತದನಂತರ, ಕಾರ್ಯಸೂಚಿಯ ಪ್ರಕಾರ ಚರ್ಚಿಸಿ, ಕೆಳಕಂಡಂತೆ ತೀರ್ಮಾನಗಳನ್ನು ಕೈಗೊಳ್ಳಲಾಯಿತು.

| | |
|---|---|
| ಐಟಂ–1 | **ದಿನಾಂಕ 26–4–2014 ರಂದು ಜರುಗಿದ ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಮಾನ್ಯ ವ್ಯವಸ್ಥಾಪನಾ ಮಂಡಳಿಯ ಹತ್ತೊಂಭತ್ತನೇಯ ಸಭೆಯ ನಡುವಳಿಗಳನ್ನು ಸ್ಥಿರೀಕರಿಸುವುದು**<br><br>**ಠರಾವು:**<br>ದಿನಾಂಕ 26–4–2014 ರಂದು ಜರುಗಿದ ಮಾನ್ಯ ವ್ಯವಸ್ಥಾಪನಾ ಮಂಡಳಿಯ ಹತ್ತೊಂಭತ್ತನೇಯ ಸಭೆಯ ನಡುವಳಿಕೆಗಳನ್ನು ಓದಲಾಯಿತೆಂದು ಪರಿಗಣಿಸಿ, ಸ್ಥಿರೀಕರಿಸಲಾಯಿತು **(ಕ್ರಮ: ಕುಲಸಚಿವರು)** |
| ಐಟಂ–2 | **ದಿನಾಂಕ 26–4–2014 ರಂದು ಜರುಗಿದ ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಮಾನ್ಯ ವ್ಯವಸ್ಥಾಪನಾ ಮಂಡಳಿಯ ಹತ್ತೊಂಭತ್ತನೇಯ ಸಭೆಯ ನಡುವಳಿಗಳ ಪ್ರಕಾರ ಕೈಗೊಂಡ ಕ್ರಮಗಳಿಗೆ ಅನುಮೋದನೆ ನೀಡುವುದು**<br><br>**ಠರಾವು:**<br>ದಿನಾಂಕ 26–4–2014 ರಂದು ಜರುಗಿದ ಮಾನ್ಯ ವ್ಯವಸ್ಥಾಪನಾ ಮಂಡಳಿಯ ಹತ್ತೊಂಭತ್ತನೇಯ ಸಭೆಯ ನಡುವಳಿಕೆಗಳ ಪ್ರಕಾರ ಕೈಗೊಂಡ ಕ್ರಮಗಳಿಗೆ ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು. ಮುಂದುವರೆದು, ಅಡಿಷ್ನಲ್ ಡೈರೆಕ್ಟರ್ ಜನರಲ್ ಆಫ್ ಪೋಲಿಸ್, ನಾಗರೀಕ ಹಕ್ಕು ಜಾರಿ ನಿರ್ದೇಶನಾಲಯ, ಬೆಂಗಳೂರು ಹಾಗೂ ಡಾ. ಬಿ.ಟಿ. ಪೂಜಾರಿ, ಡೀನ್ (ಕೃಷಿ) ಅವರುಗಳಿಗೆ ಸಂಬಂಧಪಟ್ಟ ಪ್ರಕರಣವನ್ನು ವಿಶ್ವವಿದ್ಯಾಲಯದ ವಕೀಲರ ಮುಖಾಂತರ ತ್ವರಿತವಾಗಿ ಇತ್ಯರ್ಥಗೊಳಿಸುವಂತೆ ಮಾನ್ಯ ವ್ಯವಸ್ಥಾಪನಾ ಮಂಡಳಿಯು ಸಲಹೆ ನೀಡಿತು **(ಕ್ರಮ: ಕುಲಸಚಿವರು)** |
| ಐಟಂ–3 | **ಕೃಷಿ ವಿಶ್ವವಿದ್ಯಾಲಯ ರಾಯಚೂರಿನ 2013–14 ನೇ ಸಾಲಿನ ವಾರ್ಷಿಕ ವರದಿಯನ್ನು ಅವಗಾಹನೆಗಾಗಿ ಹಾಗೂ ಅನುಮೋದನೆಗಾಗಿ ಸಲ್ಲಿಸುವ ಕುರಿತು.**<br><br>**ಠರಾವು:**<br>ವಿಸ್ತೃತ ಚರ್ಚೆಯ ನಂತರ, ವಾರ್ಷಿಕ ವರದಿಯನ್ನು ಸರಕಾರಕ್ಕೆ ಸಲ್ಲಿಸುವ ಮುಂಚೆ ಕೆಳಗೆ ತಿಳಿಸಿದ ಅಂಶಗಳನ್ನು ವಾರ್ಷಿಕ ವರದಿಯಲ್ಲಿ ಅಳವಡಿಸಿಕೊಳ್ಳುವ ಸಲಹೆಯೊಂದಿಗೆ ಸದರಿ ವಿಷಯಕ್ಕೆ ಅನುಮೋದನೆ ನೀಡಿತು. |

| | |
|---|---|
| | 1. ಮೊದಲು ಕನ್ನಡ ಭಾಷೆಯಲ್ಲಿ ಹಾಗೂ ನಂತರ ಆಂಗ್ಲ ಭಾಷೆಯಲ್ಲಿ ವರದಿ ಇರತಕ್ಕದ್ದು.<br>2. ಭಾರತೀಯ ಕೃಷಿ ಸಂಶೋಧನಾ ಪರಿಷತ್ತು / ಭಾರತ ಸರಕಾರದ ಸಂಸ್ಥೆಗಳವರ ವಾರ್ಷಿಕ ವರದಿ ಪ್ರಕಾರ ನಿರಂತರತೆ ಹಾಗೂ ವಿಷಯಗಳು ಒಂದಕ್ಕೊಂದು ಹೊಂದಾಣಿಕೆಯುಳ್ಳ ಉತ್ತಮ ಗುಣಮಟ್ಟದ ವಾರ್ಷಿಕ ವರದಿಯನ್ನು ತಯಾರಿಸತಕ್ಕದ್ದು.<br>(ಕ್ರಮ : ವಿಸ್ತರಣಾ ನಿರ್ದೇಶಕರು) |
| ಐಟಂ–4 | **ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ವಿವಿಧ ಆವರಣಗಳಲ್ಲಿ ಹತ್ತು ಲಕ್ಷ ರೂಪಾಯಿಗಳಿಗೆ ಮೀರಿದ ಟೆಂಡರ್ ಮಾಡಿದ ಸಿವಿಲ್ ಕಾಮಗಾರಿಗಳನ್ನು ಕೈಗೊಳ್ಳಲು ಅನುಮೋದನೆ ಕುರಿತು.**<br><br>**ಠರಾವು:**<br>ಕಡಿಮೆ ದರ ನಮೂದಿಸಿದ ಬಿಡ್ಡುದಾರರಿಗೆ ಟೆಂಡರ್ ಮಾಡಿದ ಸಿವಿಲ್ ಕಾಮಗಾರಿಗಳನ್ನು ಕೈಗೊಳ್ಳುವ ಸಲುವಾಗಿ ನೀಡಿದ ಕಾರ್ಯಾದೇಶಕ್ಕೆ ಮಾನ್ಯ ವ್ಯವಸ್ಥಾಪನಾ ಮಂಡಳಿಯು ಸ್ಥಿರೀಕರಿಸಿತು. ಮುಂದುವರೆದು, ಇನ್ನು ಮುಂದೆ ಸಿವಿಲ್ ಕಾಮಗಾರಿಗಳ ಜೊತೆಗೆ ವಿದ್ಯುತ್ ಕಾಮಗಾರಿಗಳನ್ನು ಸಹ ಏಕಕಾಲದಲ್ಲಿ ಟೆಂಡರ್ ಮಾಡಲು ಸಲಹೆ ನೀಡಲಾಯಿತು. **(ಕ್ರಮ : ಕಾರ್ಯನಿರ್ವಾಹಕ ಅಭಿಯಂತರರು)** |
| ಐಟಂ–5 | **ಹತ್ತು ಲಕ್ಷ ರೂಪಾಯಿಗಳಿಗೆ ಮೀರಿದ ಪ್ರಯೋಗಾಲಯ ಉಪಕರಣಗಳನ್ನು ಖರೀದಿಸಲು ಅನುಮೋದನೆ ಕುರಿತು.**<br><br>**ಠರಾವು:**<br>ವಿವರವಾದ ಚರ್ಚೆಯ ನಂತರ, ಹತ್ತು ಲಕ್ಷ ರೂಪಾಯಿಗಳಿಗೆ ಮೀರಿದ ಪ್ರಯೋಗಾಲಯ ಉಪಕರಣಗಳನ್ನು ಖರೀದಿಸುವ ಯಾದಿಗೆ ಹಣಕಾಸು ಸಮಿತಿಯ ಸ್ಥಿರೀಕರಣ / ಒಪ್ಪಿಗೆಯನ್ನು ನಿರೀಕ್ಷೆಯಲ್ಲಿಟ್ಟು ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು.<br>**(ಕ್ರಮ : ಹಣಕಾಸು ನಿಯಂತ್ರಣಾಧಿಕಾರಿಗಳು / ಸರಕು ಖರೀದಿ ಅಧಿಕಾರಿಗಳು)** |
| ಐಟಂ–6 | **ಅಂತರರಾಷ್ಟ್ರೀಯ ತರಬೇತಿ / ಕಾರ್ಯಾಗಾರಗಳಲ್ಲಿ / ಸಮ್ಮೇಳನ / ಅಲ್ಪಾವಧಿ ಕೋರ್ಸ್ ಇತ್ಯಾದಿಗಳಲ್ಲಿ ಶಿಕ್ಷಕರು /ವಿಜ್ಞಾನಿಗಳಿಗೆ ವಿದೇಶಗಳಿಗೆ ಪ್ರತಿನಿಯೋಜನೆ ಮಾಡುವ ಕುರಿತು**<br><br>**ಠರಾವು:**<br>ದೀರ್ಘ ಚರ್ಚೆಯ ನಂತರ, ಮಾನ್ಯ ವ್ಯವಸ್ಥಾಪನಾ ಮಂಡಳಿಯು ಸದರಿ ವಿಷಯಕ್ಕೆ ಅನುಮೋದನೆ ನೀಡಿತು. ಮುಂದುವರೆದು, ಮಾನ್ಯ ವ್ಯವಸ್ಥಾಪನಾ ಮಂಡಳಿಯ ಸದಸ್ಯರುಗಳು ತಾಂತ್ರಿಕ ಜ್ಞಾನ ಪಡೆದುಕೊಳ್ಳುವ ಸಲುವಾಗಿ ಭಾರತದ ಇತರೇ ಪ್ರದೇಶಗಳಿಗೆ ಹಾಗೂ ವಿದೇಶಗಳಿಗೆ ಭೇಟಿ ನಿಡುವ ಕುರಿತು ಚರ್ಚಿಸುತ್ತಾ, ಸರಕಾರದ ಅನುಮೋದನೆ ಹಾಗೂ ನಿಯಮಾವಳಿಗಳನುಸಾರ ವಿಶೇಷ ತಂತ್ರಜ್ಞಾದ ಸಲುವಾಗಿ ಬೇರೆ ಬೇರೆ ತಂಡಗಳನ್ನು ರಚಿಸಿ ಹಾಗೂ ಭಾರತದ ಇತರೆ ಸ್ಥಳಗಳಿಗೆ ಒಟ್ಟಾಗಿ ಕಳುಹಿಸಲು ಪ್ರಧಾನ ಕಾರ್ಯದರ್ಶಿಗಳು (ಕೃಷಿ) ಅವರು ಸಲಹೆ ನೀಡಿದರು. **(ಕ್ರಮ: ಕುಲಸಚಿವರು/ಸಂಶೋಧನಾ ನಿರ್ದೇಶಕರು)** |
| ಐಟಂ–7 | **ಉನ್ನತ ವ್ಯಾಸಂಗವಾದ ಪಿ.ಹೆಚ್.ಡಿ. ಪದವಿಯ ಅಧ್ಯಯನಕ್ಕಾಗಿ 2013–14 ಮತ್ತು 2014–15 ನೇ ಸಾಲಿನಲ್ಲಿ ಸೇವಾನಿರತ ಶಿಕ್ಷಕರು / ವಿಜ್ಞಾನಿಗಳಿಗೆ ಪ್ರತಿನಿಯೋಜನೆ ಸೌಲಭ್ಯವನ್ನು ನೀಡುವ ಕುರಿತು.**<br><br>**ಠರಾವು:**<br>ದೀರ್ಘ ಚರ್ಚೆಯ ನಂತರ, ಮಾನ್ಯ ವ್ಯವಸ್ಥಾಪನಾ ಮಂಡಳಿಯು ಸದರಿ ವಿಷಯಕ್ಕೆ ಅನುಮೋದನೆ ನೀಡಿತು ಹಾಗೂ ಕಾರ್ಯನಿರತ ಶಿಕ್ಷಕರು / ವಿಜ್ಞಾನಿಗಳಿಗೆ ಉನ್ನತ ವ್ಯಾಸಂಗವಾದ ಪಿ.ಹೆಚ್.ಡಿ. ಪದವಿಯಲ್ಲಿ ಕೃವಿವಿ ರಾಯಚೂರಿನಲ್ಲಿ ಅಧ್ಯಯನಕ್ಕಾಗಿ 2013–'14 ಮತ್ತು 2014–'15 ನೇ ಸಾಲಿನಲ್ಲಿ ಅನುಕ್ರಮವಾಗಿ |

| | |
|---|---|
| | ಇಬ್ಬರು ಶಿಕ್ಷಕರಿಗೆ ಹಾಗೂ "Sandwich" ಅಡಿ ಅಧ್ಯಯನಕ್ಕಾಗಿ ವಿವಿಧ ವಿಶ್ವವಿದ್ಯಾಲಯಗಳಿಗೆ ಮೂವರು ಶಿಕ್ಷಕರಿಗೆ 2014–'15 ನೇ ಸಾಲಿನಲ್ಲಿ ನಿಯೋಜಿಸಿ ಕೈಗೊಂಡ ಕ್ರಮಕ್ಕೆ ಮಾನ್ಯ ವ್ಯವಸ್ಥಾಪನಾ ಮಂಡಳಿಯು ಸ್ಥಿರೀಕರಿಸಿತು.<br>(ಕ್ರಮ: ಕುಲಸಚಿವರು) |
| ಐಟಂ–8 | **ಕರ್ನಾಟಕ ಸಾರ್ವಜನಿಕ ಉದ್ಯೋಗ (ಹೈದ್ರಾಬಾದ್–ಕರ್ನಾಟಕ ಪ್ರದೇಶಕ್ಕೆ ನೇಮಕಾತಿಯಲ್ಲಿ ಮೀಸಲಾತಿ) ಆದೇಶ, 2013 ಅನ್ನು ಕೃವಿವಿ ರಾಯಚೂರಿನಲ್ಲಿ ಅಳವಡಿಸಿಕೊಳ್ಳಲು ಅನುಮೋದನೆ ಕುರಿತು**<br><br>**ಠರಾವು:**<br>ಭಾರತೀಯ ಸಂವಿಧಾನದ ಅನುಚ್ಛೇದ 371(ಜೆ) ಹಾಗೂ 2013 ರ ಕರ್ನಾಟಕ ಸರಕಾರದ ಆದೇಶದ ಪ್ರಕಾರ ಹೈದ್ರಾಬಾದ್ ಕರ್ನಾಟಕ ಪ್ರದೇಶದವರಿಗಾಗಿ ನೇಮಕಾತಿಗಳಲ್ಲಿ ಒದಗಿಸಲಾದ ಮೀಸಲಾತಿ ಕುರಿತು ವಿಶೇಷ ಆಹ್ವಾನಿತರಾದ ಶ್ರೀ ಲೋಕನಾಥ, ಜಂಟಿ ಕಾರ್ಯದರ್ಶಿಗಳು, ಸಿಆಸುಇ (ಹೈದ್ರಾಬಾದ್ ಕರ್ನಾಟಕ ವಿಶೇಷ ಕೋಶ) ಅವರು ಮಾನ್ಯ ವ್ಯವಸ್ಥಾಪನಾ ಮಂಡಳಿಯ ಸದಸ್ಯರುಗಳಿಗೆ ವಿವರಿಸಿದರು. ವಿಸ್ತೃತ ಚರ್ಚೆಯ ನಂತರ, ಸದರಿ ಆದೇಶಾನುಸಾರ ನೇಮಕಾತಿಗಳಲ್ಲಿ ಒದಗಿಸಲಾದ ಮೀಸಲಾತಿಯನ್ನು ಪ್ರಾರಂಭದಲ್ಲಿಯೇ ಸೂಕ್ತವಾಗಿ ಕಾರ್ಯರೂಪಕ್ಕೆತರಲು ಪ್ರಧಾನ ಕಾರ್ಯದರ್ಶಿಗಳು (ಕೃಷಿ) ಅವರ ಮುಖಾಂತರ ಶ್ರೀ ಲೋಕನಾಥ ಅವರನ್ನು ಸಂಪರ್ಕಿಸಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ಸಲಹೆ ನೀಡಿತು.<br>**(ಕ್ರಮ: ಕುಲಸಚಿವರು / ಡೀನ್ (ಕೃಷಿ ತಾಂತ್ರಿಕತೆ))** |
| ಐಟಂ–9 | **ಕೃಷಿ ಮತ್ತು ಕೃಷಿ ತಾಂತ್ರಿಕ ವಿಷಯಗಳಲ್ಲಿಯ ಸ್ನಾತಕ ಹಾಗೂ ಸ್ನಾತಕೋತ್ತರ ಪದವಿ ಕಾರ್ಯಕ್ರಮಗಳಿಗೆ ಎನ್.ಆರ್.ಐ. ಪ್ರಾಯೋಜಿತ ಅಭ್ಯರ್ಥಿಗಳಿಗೆ ಪ್ರವೇಶ ನೀಡುವ ಪ್ರಸ್ತಾವನೆಗೆ ಘಟನೋತ್ತರ ಅನುಮೋದನೆ ಕುರಿತು.**<br><br>**ಠರಾವು:**<br>ವಿಸ್ತೃತ ಚರ್ಚೆಯ ನಂತರ, ಸ್ನಾತಕ ಪದವಿ ಕಾರ್ಯಕ್ರಮಗಳಿಗೆ ಅನಿವಾಸಿ ಭಾರತೀಯ (ಎನ್.ಆರ್.ಐ.) ಕೋಟಾದಡಿ ಸಂಸ್ಥೆಯ ಪ್ರಸ್ತುತ ಮಿತವ್ಯಯದ ಶುಲ್ಕ ಯುಎಸ್ ಡಾಲರ್ 6000 ದಿಂದ ಯುಎಸ್ ಡಾಲರ್ 5000 ಕ್ಕೆ ಇಳಿಸಿ ಹಾಗೂ ಸ್ನಾತಕೋತ್ತರ ಪದವಿ ಕಾರ್ಯಕ್ರಮಗಳಿಗೆ ಮೇಲೆ ತಿಳಿಸಿದ ಶುಲ್ಕದಲ್ಲಿ ಯಾವುದೇ ಬದಲಾವಣೆಯಿಲ್ಲದೇ ಪ್ರವೇಶ ನೀಡುವ ಸಲಹೆಯೊಂದಿಗೆ ಮಾನ್ಯ ವ್ಯವಸ್ಥಾಪನಾ ಮಂಡಳಿಯು ಸದರಿ ವಿಷಯಕ್ಕೆ ಅನುಮೋದನೆ ನೀಡಿತು.<br>(ಕ್ರಮ: ಕುಲಸಚಿವರು) |
| ಐಟಂ–10 | **ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಬೆಂಗಳೂರು ಮುಖಾಂತರ ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಬಿ.ಎಸ್.ಸಿ. (ಕೃಷಿ) / ಬಿ.ಟೆಕ್.(ಕೃಷಿ ತಾಂತ್ರಿಕ) ಪದವಿ ಕಾರ್ಯಕ್ರಮಗಳಿಗೆ ವಿದ್ಯಾರ್ಥಿಗಳಿಗೆ ಪ್ರವೇಶ ನೀಡುವ ಪ್ರಸ್ತಾವನೆಗೆ ಘಟನೋತ್ತರ ಅನುಮೋದನೆ ಕುರಿತು.**<br><br>**ಠರಾವು:**<br>ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಬೆಂಗಳೂರು ಮುಖಾಂತರ ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಬಿ.ಎಸ್.ಸಿ. (ಕೃಷಿ) / ಬಿ.ಟೆಕ್.(ಕೃಷಿ ತಾಂತ್ರಿಕ) ಪದವಿ ಕಾರ್ಯಕ್ರಮಗಳಿಗೆ ವಿದ್ಯಾರ್ಥಿಗಳಿಗೆ ಪ್ರವೇಶ ನೀಡಿ ಕೈಗೊಂಡ ಕ್ರಮಕ್ಕೆ ಮಾನ್ಯ ವ್ಯವಸ್ಥಾಪನಾ ಮಂಡಳಿಯು ಸ್ಥಿರೀಕರಿಸಿ ಅನುಮೋದನೆ ನೀಡಿತು.<br>(ಕ್ರಮ: ಕುಲಸಚಿವರು) |
| ಐಟಂ–11 | **ಸಿ.ಎ.ಎಸ್.2006 ಯೋಜನೆಯಡಿ ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಶಿಕ್ಷಕರ ಪದೋನ್ನತಿ ಕುರಿತು**<br>**ಠರಾವು:**<br>ಸಿ.ಎ.ಎಸ್.–2006 ಅಡಿ ಎ.ಜಿ.ಪಿ. ರೂ. 6000 ರಿಂದ ಎ.ಜಿ.ಪಿ. ರೂ.7000 ಕ್ಕೆ ಯಾದಿಯಲ್ಲಿ ನಮೂದಿಸಿರುವಂತೆ ಅರ್ಹ ಶಿಕ್ಷಕರ ಮುಂಬಡ್ತಿಗಾಗಿ ಘನ ವೇದಿಕೆಯು ಅನುಮೋದನೆ ನೀಡಿತು.<br>(ಕ್ರಮ: ಕುಲಸಚಿವರು) |

| | |
|---|---|
| ಐಟಂ– 12 | ಹತ್ತು ಲಕ್ಷ ರೂಪಾಯಿಗಳಿಗೆ ಮೀರಿದ ಹೊಸ ಸಿವಿಲ್ ಕಾಮಗಾರಿಗಳನ್ನು ಕೈಗೊಳ್ಳಲು ಅನುಮೋದನೆ ಕುರಿತು.<br><br>**ಠರಾವು:**<br>ವಿವರವಾದ ಚರ್ಚೆಯ ನಂತರ, ಹತ್ತು ಲಕ್ಷ ರೂಪಾಯಿಗಳಿಗೆ ಮೀರಿದ ಹೊಸ ಸಿವಿಲ್ ಕಾಮಗಾರಿಗಳನ್ನು ಟೆಂಡರ್ ನಿಯಮಾವಳಿಗಳನುಸಾರ ಕೈಗೊಳ್ಳಲು ಹಣಕಾಸು ಸಮಿತಿಯ ಸ್ಥಿರೀಕರಣ / ಒಪ್ಪಿಗೆಯನ್ನು ನಿರೀಕ್ಷೆಯಲ್ಲಿಟ್ಟು ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು.<br>**(ಕ್ರಮ : ಹಣಕಾಸು ನಿಯಂತ್ರಣಾಧಿಕಾರಿಗಳು / ಕಾರ್ಯನಿರ್ವಾಹಕ ಅಭಿಯಂತರರು)** |
| | ಮುಂದುವರೆದು, ಈ ಭಾಗದ ರೈತ ಸಮುದಾಯದವರಿಗೆ ಲಾಭದಾಯಕವಾಗುವಂತೆ ಡಿ.ಡಿ. ಚಾನೆಲ್‌ನೊಂದಿಗೆ ಹೊಂದಾಣಿಕೆ ಮಾಡಿಕೊಂಡು 24 ತಾಸುಗಳ ಎಫ್.ಎಂ. ರೇಡಿಯೋ ಕೇಂದ್ರವನ್ನು ಪ್ರಾರಂಭಿಸಲು ಪ್ರಧಾನ ಕಾರ್ಯದರ್ಶಿಗಳು (ಕೃಷಿ) ಅವರು ಸಲಹೆ ನೀಡಿದರು. |

ಕುಲಸಚಿವರು ಹಾಗೂ ವ್ಯವಸ್ಥಾಪನಾ ಮಂಡಳಿಯ ಸದಸ್ಯ–ಕಾರ್ಯದರ್ಶಿಯವರ ಧನ್ಯವಾದಗಳೊಂದಿಗೆ ಸಭೆಯು ಮುಕ್ತಾಯಗೊಂಡಿತು.

| | |
|---|---|
| ಸಹಿ /– 30–9–2014 | ಸಹಿ /– 30–9–2014 |
| **(ಬಿ.ಎಸ್. ಜನಗೌಡರ್)**<br>ಕುಲಪತಿಗಳು ಹಾಗೂ ಅಧ್ಯಕ್ಷರು<br>ವ್ಯವಸ್ಥಾಪನಾ ಮಂಡಳಿ, ಕೃವಿವಿ ರಾಯಚೂರು. | **(ಬಿ.ಎಸ್. ಜನಗೌಡರ್)**<br>ಕುಲಸಚಿವರು ಹಾಗೂ ಸದಸ್ಯ–ಕಾರ್ಯದರ್ಶಿ<br>ವ್ಯವಸ್ಥಾಪನಾ ಮಂಡಳಿ, ಕೃವಿವಿ ರಾಯಚೂರು. |

**(ಬಿ.ಎಸ್. ಜನಗೌಡರ್)**
ಕುಲಸಚಿವರು ಹಾಗೂ ಸದಸ್ಯ–ಕಾರ್ಯದರ್ಶಿ
ವ್ಯವಸ್ಥಾಪನಾ ಮಂಡಳಿ, ಕೃವಿವಿ ರಾಯಚೂರು.